# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಕನಕಪುರ

## ಸಿ.ಸಿ ನಂ:970/2013

| **ಚಾಸಾ :** | **1** | **ಪ್ರಾಸಾ:-** | **4** |
|---|---|---|---|

| | |
|---|---|
| ಹೆಸರು | ಜಯರಾಮಯ್ಯ |
| ತಂದೆಯ ಹೆಸರು | . ಲಿಂಗಪ್ಪ |
| ವಯಸ್ಸು | **58** |
| ಉದ್ಯೋಗ | ವ್ಯವಸಾಯ |
| ವಿಳಾಸ | ಶಂಬೇಗೌಡನದೊಡ್ಡಿ ಗ್ರಾಮ |

- - - - - - - - - - - - - - - - - - - - - - - - - - - - -

**ದಿ:26.07.2023ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು.**

**<u>ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-</u>**

ದಿ.**31.02.1968** ರಂದು ನನ್ನ ತಾಯಿ ಸರ್ವೆ ನಂ.**91/1** ರಲ್ಲಿ ಕ್ಷೇತ್ರ **1** ಎಕರೆ ಜಮೀನನ್ನು ನಾರಾಯಣರಾವ್ ಮತ್ತು ನರಸೋ ಬಾಯಿ ಇವರಿಂದ ನೋಂದಾಯಿತ ಕ್ರಯಪತ್ರದ ಮೂಲಕ ಖರೀದಿಸಿದ್ದರು. ದಿ.**3.10.1969** ರಂದು ನನ್ನ ತಾಯಿ ಕೆಂಪಮ್ಮ ಮೃತರಾಗಿದ್ದು, **1** ನೇ ಆರೋಪಿ ಗಿರಿಯಪ್ಪ ಇತನು ನನ್ನ ತಾಯಿ **1969** ರಲ್ಲೆ ಮೃತರಾಗಿದ್ದರೂ ದಿ.**1.2.2012** ರಂದು ನನ್ನ ತಾಯಿಯ ಹೆಸರಿನಲ್ಲಿ ಬೇರೊಬ್ಬ ಕೆಂಪಮ್ಮಳನ್ನು ತಂದು ನನ್ನ ತಾಯಿಯ ಜಮೀನನ್ನು ತನ್ನ ಹೆಸರಿಗೆ ನೋಂದಣಿ ಕ್ರಯಪತ್ರ ಮಾಡಿಸಿಕೊಂಡು ಮೋಸ ಮಾಡಿರುತ್ತಾನೆ.

ಸದರಿ ಗಿರಿಯಪ್ಪ ಮೋಸದ ಕ್ರಯಪತ್ರ ಮಾಡಿಸಿದ **15** ದಿನಗಳ ನಂತರ ನನಗೆ ವಿಷಯ ಗೊತ್ತಾಗಿದ್ದು, ನಾನು ಹಾರೋಹಳ್ಳಿ ಪೊಲೀಸ್ ಠಾಣೆಗೆ ಹೋಗಿ ದೂರನ್ನು

ನೀಡಿರುತ್ತೇನೆ. ಸದರಿ ಹಾರೋಹಳ್ಳಿ ಪೊಲೀಸರು ಕನಕಪುರ ಪುರ ಪೊಲೀಸ್ ಠಾಣೆಗೆ ಹೋಗುವಂತೆ ದಿ.11.05.2012 ರಂದು ತಿಳಿಸಿರುತ್ತಾರೆ. ದಿ.11.05.2012 ರಂದು ಪುರ ಪೊಲೀಸ್ ಠಾಣೆಯ ಪೊಲೀಸರು ಉಪನೋಂದಣಿಕಾರಿಗಳ ಕಚೇರಿಗೆ ಪೊಲೀಸರು, ನನ್ನನ್ನು ಮತ್ತು ಚಾಸಾ-2 ರಿಂದ 4 ರವರನ್ನು ಕರೆದುಕೊಂಡು ಹೋಗಿ ಮಹಜರ್ ಜರುಗಿಸಿರುತ್ತಾರೆ.

ಆರೋಪಿತರು ಕ್ರಯಪತ್ರದ ಆಧಾರದ ಮೇಲೆ ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತಾರೆ. ಆರೋಪಿತರು ನನಗೆ ಮೋಸ ಮಾಡಿದ್ದು, ನನಗೆ ನ್ಯಾಯ ದೊರಕಿಸಿಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಇಷ್ಟನ್ನು ಹೊರತುಪಡಿಸಿ ಬೇರೇನು ಗೊತ್ತಿರುವುದಿಲ್ಲ.

ನನಗೆ ಈಗ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇರುತ್ತದೆ. ಆ ದಾಖಲೆಯು ದೂರಾಗಿದ್ದು, ಅದನ್ನು ನಿಪಿ-2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ನನಗೆ ಈಗ ತೋರಿಸಿದ ಮತ್ತೊಂದು ದಾಖಲೆಯಲ್ಲಿ ನನ್ನ ಸಹಿ ಇರುತ್ತದೆ. ಆ ದಾಖಲೆಯು ಪಂಚನಾಮೆಯಾಗಿದ್ದು, ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು.

ದೂರಿನೊಂದಿಗೆ ನಾನು ವಂಶವೃಕ್ಷ, ಪ್ರಮಾಣ ಪತ್ರ ಮತ್ತು 2011-12 ನೇ ಸಾಲಿನ ಪಹಣಿಯ ನೋಟರೈಸ್ಡ್ ಪ್ರತಿಯನ್ನು ಮತ್ತು ದಿ.31.05.1968 ರ ನೋಟರೈಸ್ಡ್ ಖರೀದಿ ಪತ್ರ, ಮ್ಯೂಟೇಷನ್ ಪ್ರತಿ ಮತ್ತು ನನ್ನ ತಾಯಿಯ ಉತ್ತರಕ್ರಿಯಾದಿ ಆಹ್ವಾನ ಪತ್ರಿಕೆಯ ಅಟೆಸ್ಟೇಡ್ ಪ್ರತಿಯನ್ನು ಮತ್ತು ದಿ.1.2.2012 ರ ಕ್ರಯಪತ್ರದ ನೋಟರೈಸ್ಡ್ ಪ್ರತಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-3 ರಿಂದ 9 ಎಂದು ಗುರುತಿಸಲಾಯಿತು.

ಸದರಿ 1ನೇ ಆರೋಪಿ ಮೋಸತನದಿಂದ ಸೃಷ್ಟಿಸಿದ ಕ್ರಯಪತ್ರಕ್ಕೆ ಮಾದಯ್ಯ, ಮಾದೇಗೌಡ, ಶಿವರಾಮು, ರವೀಂದ್ರ ಇವರುಗಳು ಸಾಕ್ಷಿದಾರರೆಂದು ಸಹಿ ಮಾಡಿರುತ್ತಾರೆ. ಆರೋಪಿತರಲ್ಲಿ 3ನೇ ಆರೋಪಿ ಮಾದೇಗೌಡ ಮಾತ್ರ ನಮ್ಮ ಊರಿನವರಾಗಿದ್ದು, ಬೇರೆಯವರು ನಮ್ಮ ಊರಿನವರು ಆಗಿರುವುದಿಲ್ಲ.

**<u>ಪಾಟೀ ಸವಾಲು :-</u>**

ಆರೋಪಿ ಪರ ವಕೀಲರು ಪ್ರಾಸಾ-1 ರವರ ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದು, ಯಾವುದೇ ಸಕಾರಣಗಳು ಇಲ್ಲದ ಕಾರಣ ಪ್ರಾಸಾ-1 ರವರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆ :ಇಲ್ಲ**

**(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಡಿಕರೀಸುತ್ತೇನೆ.)**

**ಓ ಹೇ ಕೇ ಸ ಇ**

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ ಕನಕಪುರ.**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಕನಕಪುರ**

**ಸಿ.ಸಿ ನಂಃ970/2013**

| | | | |
|---|---|---|---|
| **ಚಾಸಾ ಃ** | **3** | **ಪ್ರಾಸಾಃ-** | **5** |

ಹೆಸರು ನಂಜುಂಡಪ್ಪ

ತಂದೆಯ ಹೆಸರು ಲಿಂಗಪ್ಪ

ವಯಸ್ಸು **65**

ಉದ್ಯೋಗ ವ್ಯವಸಾಯ

ವಿಳಾಸ ಶಂಬೇಗೌಡನದೊಡ್ಡಿ ಗ್ರಾಮ

- - - - - - - - - - - - - - - - - - - - - - - - - - - - -

**ದಿಃ26.07.2023ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ಆರೋಪಿತರ ಪರಿಚಯವಿಲ್ಲ. ಸರ್ವೆ ನಂ.91/1 ರ ಜಮೀನನ್ನು ನನ್ನ ತಾಯಿ 1968 ರಲ್ಲಿ ಖರೀದಿಸಿದ್ದು, ಅವರ ಮರಣದ ನಂತರ ಜಮೀನು ನಮ್ಮ ಸ್ವಾಧೀನಾನುಭವದಲ್ಲಿ ಇರುತ್ತದೆ. ನಮಗೆ ಯಾರು ಮೋಸ ಮಾಡಿರುವುದಿಲ್ಲ.

ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ. ಅವರಿಗೆ ನಾನು ಹೇಳಿಕೆಯನ್ನು ನೀಡಿಲ್ಲ.

**ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ದವಾಗಿ ಸಾಕ್ಷ್ಯ ನುಡಿದಿರುವುದರಿಂದ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲನ್ನು**

**<u>ಮಾಡಲು ಮಾನ್ಯ ಎಪಿಪಿ ರವರು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.</u>**

**<u>ಪಾಟೀ ಸವಾಲು ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-</u>**

ನನ್ನ ತಾಯಿ ಸರ್ವೆ ನಂ.91/1 ರಲ್ಲಿ ಕ್ಷೇತ್ರ 1 ಎಕರೆ ಜಮೀನನ್ನು ನಾರಾಯಣರಾವ್ ಮತ್ತು ನರಸೋ ಬಾಯಿ ಇವರಿಂದ ನೋಂದಾಯಿತ ಕ್ರಯಪತ್ರದ ಮೂಲಕ ಖರೀದಿಸಿದ್ದರು. ದಿ.3.10.1969 ರಂದು ನನ್ನ ತಾಯಿ ಕೆಂಪಮ್ಮ ಮೃತರಾಗಿದ್ದು, 1 ನೇ ಆರೋಪಿ ಗಿರಿಯಪ್ಪ ಉಃ ಅಜ್ಜಪ್ಪ ಮತ್ತು ಇತರರು ಸಾಕ್ಷಿದಾರರು ನನ್ನ ತಾಯಿ 1969 ರಲ್ಲೆ ಮೃತರಾಗಿದ್ದರೂ ನನ್ನ ತಾಯಿಯ ಹೆಸರಿನಲ್ಲಿ ಬೇರೊಬ್ಬ ಕೆಂಪಮ್ಮಳನ್ನು ತಂದು ನನ್ನ ತಾಯಿಯ ಜಮೀನನ್ನು ತನ್ನ ಹೆಸರಿಗೆ ನೋಂದಣಿ ಕ್ರಯಪತ್ರ ಮಾಡಿಸಿಕೊಂಡು ಮೋಸ ಮಾಡಿರುತ್ತಾನೆಂದು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**<u>ಪಾಟೀ ಸವಾಲು ಃ-</u>**

ಆರೋಪಿ ಪರ ವಕೀಲರು ಪ್ರಾಸಾ-1 ರವರ ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದು, ಯಾವುದೇ ಸಕಾರಣಗಳು ಇಲ್ಲದ ಕಾರಣ ಪ್ರಾಸಾ-1 ರವರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆ ಃಇಲ್ಲ**

**(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಡಿಕರೀಸುತ್ತೇನೆ.)**

**ಓ ಹೇ ಕೇ ಸ ಇ**

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ ಕನಕಪುರ.**